**HRC** 3/2022

**ಆರ್.ಡಬ್ಲ್ಯೂ-2**

**ದಿಃ 17–02–2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ SVK ವಕೀಲರಿಂದ**

ನಾನು 7ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸಲೂನ್ ಅಂಗಡಿಯ ವ್ಯಾಪಾರ ಮಾಡುತ್ತೇನೆ. ಮನೆ ನಂ.540/37 ನನ್ನ ಚಿಕ್ಕಪ್ಪ ಶ್ರೀ ನಿಂಗಪ್ಪ ಸಿದಲಿಂಗಪ್ಪ ಕೋರೆ ರವರ ಹೆಸರಿನಲ್ಲಿ ಇರುತ್ತದೆ. ಸದರಿ ಆಸ್ತಿಯು ನನ್ನ ತಂದೆಗೆ ವಿಭಾಗ ಆಗಿ ಬಂದಿರುತ್ತದೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿಯು ನನ್ನ ತಂದೆಯ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ನನ್ನ ಚಿಕ್ಕಪ್ಪನ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

2. ಅರ್ಜಿ ಆಸ್ತಿ ಮನೆ ನಂ.540/32 ರ ವಿಸ್ತೀರ್ಣ ನನಗೆ ಹೇಳಲಾಗುವುದಿಲ್ಲ. ಸದರಿ ಆಸ್ತಿಯ ಎಕ್ಸಟ್ರಾಕ್ಟ್ ನ್ನು ನಾನು ನೋಡಿರುವುದಿಲ್ಲ. ಎದುರುದಾರರು ಸದರಿ ಆಸ್ತಿಯಲ್ಲಿ ಬಾಡಿಗೆದಾರರಾಗಿ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಎದುರುದಾರರ ತಂದೆಯ ಕಾಲದಿಂದ, ಎದುರುದಾರರು ಸದರಿ ಆಸ್ತಿಯಲ್ಲಿ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರ ತಂದೆಯು ಸದರಿ ಆಸ್ತಿಯನ್ನು ಬಾಡಿಗೆದಾರರಾಗಿ ಅಥವಾ ಮಾಲೀಕರಾಗಿ ಇರುವ ಬಗ್ಗೆ ನಾನು ಯಾವುದೇ ಚೌಕಾಶಿ ಮಾಡಿರುವುದಿಲ್ಲ. ಈ ಅರ್ಜಿದಾರರು ಅನಗೋಳದ ಖಾಯಂ ನಿವಾಸಿಗಳು ಎಂದರೆ ಸರಿ. ಈ ಅರ್ಜಿಯಲ್ಲಿ ಹೇಳಿರುವ ಆಸ್ತಿಯನ್ನು ಹೊರತು ಪಡಿಸಿ ಅರ್ಜಿದಾರರಿಗೆ ಅನಗೋಳದ ನಾತಪೈ ನಗರದಲ್ಲಿ ಬೇರೆ ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ಅರ್ಜಿಯ ಆಸ್ತಿ ಅರ್ಜಿದಾರರ ಮಾಲೀಕತ್ವದ ಆಸ್ತಿ ಎಂದರೆ ಸಾಕ್ಷಿಯು ಸದರಿಯವರು ಆ ಆಸ್ತಿಯಲ್ಲಿ ವಾಸವಿರುತ್ತಾರೆ, ಮಾಲೀಕತ್ವದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಎದುರುದಾರರ ತಂದೆ ಈ ಅರ್ಜಿಯ ಆಸ್ತಿಯಲ್ಲಿ

ಬಾಡಿಗೆದಾರರಾಗಿ ಇರುವ ಬಗ್ಗೆ ಎದುರುದಾರರು ನನಗೆ ಯಾವತ್ತೂ ಹೇಳಿರುವುದಿಲ್ಲ. ಎದುರುದಾರರ ತಂದೆ ಹಾಗೂ ಸದರಿ ಅರ್ಜಿ ಆಸ್ತಿಯ ಮಾಲೀಕರ ನಡುವೆ ಎಷ್ಟು ಬಾಡಿಗೆಗೆ ಮಾತಾಗಿತ್ತು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ಅದೇರೀತಿಯಾಗಿ ಎದುರುದಾರರು ಅರ್ಜಿ ಆಸ್ತಿಯ ಮಾಲೀಕರಿಗೆ ಎಷ್ಟು ಬಾಡಿಗೆಯನ್ನು ಕೊಡುತ್ತಿದ್ದರು ಎಂಬುದರ ಬಗ್ಗೆ ನನಗೆ ಹೇಳಿರುವುದಿಲ್ಲ ಎಂದರೆ ಸರಿ. ಎದುರುದಾರರು ಅರ್ಜಿ ಆಸ್ತಿಯಲ್ಲಿ ಯಾವ ರೀತಿಯಲ್ಲಿ (capacity) ವಾಸವಿದ್ದಾರೆ ಎಂದು ನನಗೆ ಹೇಳಿರುವುದಿಲ್ಲ ಎಂದರೆ ಸರಿ. ಅರ್ಜಿದಾರರು ಎದುರುದಾರರ ವಿರುದ್ಧ ಈ ಅರ್ಜಿಯನ್ನು ಯಾವ ಕಾರಣಕ್ಕೆ ಹಾಕಿರುತ್ತಾರೆ ಎಂಬುದರ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಾನೂ ಸಹ ಇದರ ಬಗ್ಗೆ ಎದುರುದಾರರ ಬಳಿ ಕೇಳಿರುವುದಿಲ್ಲ ಎಂದರೆ ಸರಿ.

3. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರಿಸಲು ಎದುರುದಾರರೇ ಮಾಹಿತಿಯನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನೇ ವಕೀಲರಿಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನನ್ನ ವಕೀಲರಿಗೆ ಎದುರುದಾರರು ಅರ್ಜಿಯ ಆಸ್ತಿಯಲ್ಲಿ ಯಾವ ರೀತಿಯಲ್ಲಿ ವಾಸವಿರುತ್ತಾರೆ ಎಂಬುದರ ಬಗ್ಗೆ ಮಾಹಿತಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರಿಸುವ ಸಮಯದಲ್ಲಿ ನಾನು ಎದುರುದಾರರು ಎಲ್ಲಿ ಹಾಗೂ ಯಾವ ರೀತಿಯಲ್ಲಿ ಅರ್ಜಿಯ ಆಸ್ತಿಯಲ್ಲಿ ಇರುತ್ತಾರೆ ಎಂಬುದರ ಬಗ್ಗೆ ಸಹ ಯಾವುದೇ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರಿಸುವ ಸಮಯದಲ್ಲಿ ನಾನು ಮನೆ ನಂ.540/32 ಅರ್ಜಿ ಆಸ್ತಿಯಲ್ಲಿ ಯಾರು ವಾಸವಿರುತ್ತಾರೆ ಹಾಗೂ ಅದರ ಮಾಲೀಕತ್ವದ ಬಗ್ಗೆ ಯಾವುದೇ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ. ಎದುರುದಾರರ ತಂದೆ ಅರ್ಜಿ ಆಸ್ತಿಯಲ್ಲಿ ಬಾಡಿಗೆದಾರರಾಗಿ ಇದ್ದು, ಸದರಿಯವರು ತೀರಿಕೊಂಡ ನಂತರ ಎದುರುದಾರರ ಅವರ ಕುಟುಂಬದವರೊಂದಿಗೆ ಅರ್ಜಿಯ ಆಸ್ತಿಯಲ್ಲಿ ಬಾಡಿಗೆದಾರರಾಗಿ ವಾಸವಿರುತ್ತಾರೆ ಎಂದರೆ

**HRC** 3/2022

**ಆರ್.ಡಬ್ಲ್ಯೂ-2**

ಸಾಕ್ಷಿಯು ಎದುರುದಾರರು ಹಾಗೂ ಅವರ ಕುಟುಂಬಸ್ಥರು ಅರ್ಜಿ ಆಸ್ತಿಯಲ್ಲಿ ವಾಸವಿರುತ್ತಾರೆ, ಆದರೆ ಬಾಡಿಗೆದಾರರಾಗಿ ವಾಸವಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಎದುರುದಾರರ ಮಾತಿನ ಮೇರೆಗೆ ನನ್ನ ಸಾಕ್ಷ್ಯಪ್ರಮಾಣ ಪತ್ರವನ್ನು ತಯಾರಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿಯ ಆಸ್ತಿ, ಅರ್ಜಿದಾರರ ಹಾಗೂ ಎದುರುದಾರರ ನಡುವೆ ಏನು ಸಂಬಂಧ ಇರುತ್ತದೆ ಎಂಬುದರ ಬಗ್ಗೆ ನನಗೆವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**